‘ಎರಡೂ ಒಂದೇ’

‘ನೋಡೋಕೆ ಟಿಪ್ ಟಾಪಾಗಿ ಮಹಾ ಸಜ್ಜನರ ಹಾಗೆ ಕಾಣ್ತಾರೆ ಅಮ್ಮಾ. ಮುಖ ನೋಡಿ ಮಣೆ ಹಾಕಿದ್ರೆ ಹೀಗೇ ಆಗೋದು...’

‘ನನ್ನ ಅಷ್ಟು ದಡ್ಡಿ ಅಂದ್ಕೋಬೇಡ. ಮುಖ ನೋಡಿದ್ರೆ ಇಂತವ್ರೇ ಅಂತ ಹೇಳೋವಷ್ಟು ಬುದ್ಧಿವಂತಿಕೆ ನಂಗಿದೆ...’

ಒಟ್ಟಿನಲ್ಲಿ ಕೊನೆಯ ಮಾತು ಅಮ್ಮನದೇ ಆಗಿರಬೇಕು. ಹಾಗೆ ನಡೆಸಿಕೊಂಡಿದ್ದಾರೆ ಅಪ್ಪ. ತಮ್ಮ ಮನೆಗೆ ಅಮ್ಮನನ್ನು ಕರೆದುಕೊಂಡು ಬಂದು ಆರೇಳು ವರ್ಷ ಆಗಿರಬಹುದೇನೋ. ಪಟ್ಟಣದ ನೀರಿಗೆ, ಗಾಳಿಗೆ ಹೊಂದಿಕೊಂಡುಬಿಟ್ಟಿದ್ದಾಳೆ ಅಮ್ಮ. ಬೆಳಿಗ್ಗೆ ಒಂದಿಷ್ಟು ಹೊತ್ತು ಪೇಪರು ಓದಾಟ. ಓದುವುದೆಂದರೆ ಯಾವುದನ್ನು? ಕೊಲೆ, ದರೋಡೆ, ಆಕ್ಸಿಡೆಂಟ್ ಇಂಥ ವಿಚಾರಗಳೆಂದರೆ ಅವಳಿಗೆ ಹಬ್ಬ. ಮನಸ್ಸಲ್ಲಿ ಓದಿಕೊಳ್ಳುವುದಲ್ಲ, ಗಟ್ಟಿಯಾಗೇ ಓದಿ ಹೇಳುತ್ತಾಳೆ. ‘ನೋಡಿದ್ಯೇನೇ, ಇಲ್ಲೇ ಪಕ್ಕದ ಬೀದೀಲಿ ಹುಡುಗ ಕಿಡ್ನ್ಯಾಪ್ ಆಗಿದ್ದನ್ನ ಪೇಪರಲ್ಲಿ ಓದಿ ತಿಳ್ಕೋಬೇಕಾಯ್ತು...’

ಪುಣ್ಯಕ್ಕೆ ಅಳಿಯ ಆ ಹೊತ್ತಲ್ಲಿ ಮನೆಯಲ್ಲಿರುವುದಿಲ್ಲ. ಪೇಪರಿನ ಹೆಡ್‌ಲೈನ್ ನೋಡುತ್ತಾ ಅವಸರವಸರದಲ್ಲಿ, ಒಂಟಿಕಾಲಲ್ಲಿ ನಿಂತು ಅನ್ನುವಂತೆ ತಿಂಡಿ ತಿಂದು ಆಫೀಸಿಗೆ ದೌಡಾಯಿಸಿಯಾಗಿರುತ್ತದೆ. ಬೆಂಗಳೂರಲ್ಲಿ ಸ್ವಂತ ಮನೆ ಅಂದರೆ ಇದೊಂದು ಫಜೀತಿ. ಮನೆ ಎಲ್ಲೋ, ಆಫೀಸು ಮತ್ತೆಲ್ಲೋ. ಬೇಗ ಹೊರಡದಿದ್ದರೆ ಸಮಯಕ್ಕೆ ಸರಿಯಾಗಿ ಆಫೀಸು ಸೇರಿಕೊಳ್ಳುವುದು ಅಸಾಧ್ಯ. ಆ ಏರಿಯಾದಲ್ಲೇ ಮನೆ ನೋಡೋಣ ಅಂದರೆ ಇಲ್ಲಿ ಮಕ್ಕಳ ಸ್ಕೂಲು ಹತ್ತಿರ, ಕಾಲೇಜು ಹತ್ತಿರ, ಬಸ್ ಸ್ಟಾಪು ಹತ್ತಿರ, ಬ್ಯಾಂಕು ಹತ್ತಿರ, ದೇವಸ್ಥಾನ ಹತ್ತಿರ, ಇನ್ನೂ ಏನೇನೋ ಬೇಕಿರದ, ಬೇಕಾಗುವ ಸೌಲಭ್ಯಗಳು ಹತ್ತಿರ. ಅಲ್ಲದೆ ಆಸೆಪಟ್ಟು, ಪ್ರಯತ್ನಪಟ್ಟು, ನಾನಾ ಪಡಿಪಾಟಲು ಪಟ್ಟು ಕಟ್ಟಿಸಿಕೊಂಡಿರುವ ಸ್ವಂತ ಮನೆಯ ಮೋಹ. ಯಾವುದೋ ಕಾಲದಲ್ಲಿ ಮಾವ ಕೊಂಡು ಹಾಕಿದ್ದ ಸೈಟು. ಕೊಂಡುಕೊಂಡಿದ್ದಷ್ಟೇ ಲಭ್ಯ ಮಾವನಿಗೆ. ಮಗ ಮನೆ ಕಟ್ಟಿ ಸಂಭ್ರಮಿಸಿದ್ದನ್ನು ನೋಡುವ ಪುಣ್ಯ ಅವರಿಗೂ ಇರಲಿಲ್ಲ, ಅತ್ತೆಗೂ ಇರಲಿಲ್ಲ. ಅಮ್ಮ ಇಲ್ಲಿಗೆ ಕಾಯಂ ಅತಿಥಿಯಾಗಿ ಬಂದು ನಿಲ್ಲುತ್ತಾಳೆಂದು ಯಾರು ನಿರೀಕ್ಷೆ ಮಾಡಿದ್ದರು? ಕನಸಲ್ಲೂ ಇಲ್ಲ. ಅರೆ ಆಯುಸ್ಸಲ್ಲಿ ತಮ್ಮ ತೀರಿಕೊಂಡ. ಎದೆಬೇನೆ ಹಚ್ಚಿಕೊಂಡರು ಅಪ್ಪ. ಒಬ್ಬಂಟಿಯಾಗಿ ಅಮ್ಮನನ್ನು ಅಲ್ಲಿ ಬಿಡಲು ಸಾಧ್ಯವೇ? ತಿಂಗಳಿಗೊಂದು ಸಲ ನೋಡಿಕೊಂಡು ಬರುವುದಕ್ಕೂ ದೂರವೇ.

‘ಬಂದು ಬಿಡು ಅಮ್ಮಾ, ಒಬ್ಬಳೇ ಅಲ್ಲಿದ್ಕೊಂಡು ಏನ್ಮಾಡ್ತಿ?’ ಅಂದರೆ ಬಡಪೆಟ್ಟಿಗೆ ಒಪ್ಪಿರಲಿಲ್ಲ. ಕಲಿತ ಬುದ್ಧಿಯನ್ನೆಲ್ಲಾ ಖರ್ಚು ಮಾಡಿ ಒಪ್ಪಿಸಿ ಹೊರಡಿಸಿಕೊಂಡು ಬರಬೇಕಾಯ್ತು. ನೀರಿನಿಂದ ಹೊರ ಬಿದ್ದ ಮೀನಿನಂತೆ ಚಡಪಡಿಸುತ್ತಿದ್ದವಳು, ತನಗೆ ಮೀಸಲಿಟ್ಟ ಕೋಣೆಯಲ್ಲಿ ಒಂಟಿಯಾಗಿ ಹೊತ್ತು ಸವೆಸುತ್ತಿದ್ದವಳು, ಕ್ರಮೇಣ ಮೊಮ್ಮಕ್ಕಳ ಮುಖ ನೋಡಿ ಚೇತರಿಸಿಕೊಳ್ಳುತ್ತಾ ಬಂದಳು. ‘ಯಾವ ದುಃಖವೂ ಶಾಶ್ವತವಲ್ಲ, ಯಾರ ಅಗಲಿಕೆಯ ನೋವೂ ನಿರಂತರವಾಗಿರುವುದಿಲ್ಲ’ ಎನ್ನುವುದಕ್ಕೆ ಸಾಕ್ಷಿ? ಛೇ, ಹಾಗೆನ್ನಬಾರದು. ಅವಳ ಅಂತರಂಗದಲ್ಲಿ ಏನಿದೆಯೋ ಆ ತಾಕಲಾಟ ಅವಳಿಗಷ್ಟೇ ಗೊತ್ತಿರುತ್ತದೆ. ಇನ್ನೊಂದು ಅನುಮಾನ ಇದೆ ನಂದಿನಿಗೆ. ಅರುಳುಮರುಳಿನ ವಯಸ್ಸು ದಾಟಿ ಹೋಗಿದ್ದಾಳೆ ಅಮ್ಮ. ಸೂಕ್ಷ್ಮ ವಿಷಯಗಳು ಕಂಗೆಡಿಸದಷ್ಟು ಮನಸ್ಸು ದಡ್ಡು ಬಿದ್ದು ಹೋಗಿರಬಹುದು. ಯಾವುದೇ ವಿಷಯವನ್ನಾದರೂ ಬಹಳ ಹೊತ್ತು ತಲೆಯಲ್ಲಿಟ್ಟುಕೊಂಡು ಕೊರಗುವಷ್ಟು ಸಂವೇದನಾಶಕ್ತಿ ಚುರುಕಾಗಿಲ್ಲದಿರಬಹುದು. ಹೀಗೆಂದು ಸಾರಾಸಗಟಾಗಿ ಹೇಳುವುದೂ ಕಷ್ಟ, ಕಷ್ಟ. ಕೆಲವು ವಿಷಯ ಹಿಡಿದುಕೊಂಡರೆ ಕೂತಲ್ಲಿ, ನಿಂತಲ್ಲಿ ಅದೇ ಜಪ ಮಾಡಿ ಕರ್ಕರೆ ಹಿಡಿಸಿಬಿಡುತ್ತಾಳೆ.

‘ಮಾರಾಯ್ತೀ, ಸಾಕು ಕಣೇ...’ ಅಂದರೂ ಮತ್ತ್ಯಾವುದೋ ಗಳಿಗೆಯಲ್ಲಿ ಆ ವಿಷಯ ಪ್ರಸ್ತಾಪವಾಗಿ ತಲೆಚಿಟ್ಟು ಹಿಡಿಸುತ್ತದೆ. ಒಂದು ಉದಾಹರಣೆ ನೆನಪಿಸಿಕೊಳ್ಳಬೇಕೆಂದರೆ ಅಮ್ಮನ ರೇಷ್ಮೆಸೀರೆಯನ್ನು ಇಸ್ತ್ರಿ ಹಾಕಲು ಕೊಟ್ಟ ಕತೆ. ಗಂಡನ ಪೈಕಿಯ ಹತ್ತಿರದ ನೆಂಟರ ಮನೆಯಲ್ಲಿ ಒಂದು ಮದುವೆ ಇತ್ತು. ಇದೇ ಬೆಂಗಳೂರಲ್ಲಿ ಅದ್ದೂರಿ ಮದುವೆ. ಹಿಂದಿನ ದಿನದ ಆರತಕ್ಷತೆ, ಮರುದಿನದ ಮದುವೆಗೆ ಒತ್ತಾಯಪೂರ್ವಕ ಆಮಂತ್ರಣ. ಪತ್ರಿಕೆ ಹಂಚಲು ಬಂದವರು ನಂದಿನಿಯ ಅಮ್ಮನಿಗೂ ಒಂದು ಸೀರೆ ಕೊಟ್ಟು ಕಾಲಿಗೆ ನಮಸ್ಕರಿಸಿದ್ದು ವಿಶೇಷ.

‘ಚೂರೂ ಜಂಬ ಇಲ್ಲ ಮಾರಾಯ್ತೀ. ಇಷ್ಟು ದೊಡ್ಡ ಮನುಷ್ರಾಗಿದ್ರೆ ನಮ್ಮೂರಲ್ಲಿ ನೆತ್ತಿ ಮೇಲೆ ಕೋಡು ಬಂದ ಹಾಗೆ ಆಡ್ತಾರೆ. ಸುಮಾರಿಗಿದ್ದೋರನ್ನ ಕಣ್ಣೆತ್ತಿ ಕೂಡಾ ನೋಡಲ್ಲ. ಸೆಟೆರೋಗ ಬಂದವರ ಹಾಗೆ ಅತ್ತಿತ್ತ ತಲೆ ತಿರುಗಿಸ್ದೆ ಓಡಾಡ್ತಿರ್ತಾರೆ...’ ಎಂದೆಲ್ಲಾ ಬಂದವರ ಕುರಿತು ಹೊಗಳಿಕೆ ಹಾಕಿದ್ದಳು ಅಮ್ಮ, ಅವರು ಹೊರಟು ಹೋದಮೇಲೆ. ಹೀಗೆ ತಮ್ಮೂರನ್ನು ಆಗೀಗ ನೆನಪಿಸಿಕೊಂಡು ಅಲ್ಲಿಯ ಪರಿಚಿತರನ್ನು ಮೇಲುಗೈಯಾಗಿಸುವುದೋ, ಕಾಲಡಿ ಹಾಕಿ ತುಳಿಯುವ ಮಾತಾಡುವುದೋ ಅಮ್ಮನ ಚಾಳಿ.

ಅವತ್ತು ಕಾಲು ಮುಟ್ಟಿ ನಮಸ್ಕಾರ ಮಾಡಿ ಕರೆದುಹೋಗಿದ್ದರಲ್ಲ ನೆಂಟರು, ಎಲ್ಲಿಗೆ ಕರೆದರೂ ‘ನಾ ಬರಲ್ಲ. ನೀವು ಹೋಗ್ಬನ್ನಿ...’ ಅನ್ನುತ್ತಿದ್ದ ಅಮ್ಮ ಆ ಸಲ ಯಾಕೋ ಮೃದುವಾಗಿದ್ದಳು. ನಂದಿನಿಯೂ ಸಾಕಷ್ಟು ಬೆಣ್ಣೆ ಖರ್ಚು ಮಾಡಿದ್ದಳು.

‘ದೊಡ್ಡೋರ ಮನೆ ಮದುವೆ ಅಂದ್ರೆ ಹೆಂಗಿರುತ್ತೆ ಅಂತ ನೋಡು ಅಮ್ಮಾ. ಸಿನಿಮಾದವರೂ ಬರ್ತಾರಂತೆ ಕಣೇ...’

‘ಆಯ್ತು ಮಾರಾಯ್ತೀ, ನೀ ಹೇಳಿದ ಹಾಗೆ...’ ಹಸಿರು ನಿಶಾನೆ ಸಿಕ್ಕಿತ್ತು. ಈ ನಿಶಾನೆ ದೊರಕಿದ ಮೇಲೆ ಉಡಲು, ತೊಡಲು ಯಾವುದು ಎನ್ನುವ ಆಯ್ಕೆ ಶುರುವಾಗಿತ್ತು. ಬೀರುವಿನಲ್ಲಿ ಕೊಳೆಯುತ್ತಿದ್ದ ಅಮ್ಮನ ಜರ್ಬಾದ ಒಂದು ಸೀರೆಯನ್ನು ಕುಪ್ಪಸದ ಸಮೇತ ನಂದಿನಿ ತನ್ನ ಸೀರೆಯೊಂದಿಗೆ ಐರನ್ ಮಾಡಿಸಲು ಕೊಟ್ಟಿದ್ದಳು. ಅಲ್ಲೇ ಆಗಿದ್ದು ಎಡವಟ್ಟು. ಬೇಗ ಹೊರಟರೆ ಬೆಳಗಿನ ತಿಂಡಿಯ ಕಲಾಪವೂ ಭರ್ಜರಿಯಾಗಿ ಅಲ್ಲೇ ನಡೆದು ಹೋಗುತ್ತದೆಯೆಂಬ ಹುಮ್ಮಸ್ಸಿನಲ್ಲಿ ಹೊರಡಲು ಸಿದ್ಧರಾಗುತ್ತಿದ್ದವರಿಗೆ ಆಘಾತ. ಅವತ್ತೂ ಅಮ್ಮ ಹೀಗೇ ದನಿ ಏರಿಸಿ ನಂದಿನಿಯನ್ನು ಕರೆದಿದ್ದಳು.

‘ಏ, ಏನ್ಮಾಡ್ತಿದ್ದಿ? ಬೇಗ ಬಾ ಇಲ್ಲಿ...’

ಅರ್ಧ ಸೀರೆ ಉಟ್ಟಿದ್ದಳು ಅಮ್ಮ. ಸೆರಗು ಹೊದ್ದು ನೆರಿಗೆ ಹಿಡಿಯುವಾಗ ಬರಸಿಡಿಲಿನ ಆಘಾತ. ಇಸ್ತ್ರಿ ಮಾಡಿಸಿಟ್ಟಿದ್ದ ಸೀರೆ ಒಂದು ಕಡೆ ಹಿಂಜಿದಂತಾಗಿ ಪಿಸಿದುಕೊಂಡಿದೆ.

‘ಸೀರೇನ ಸುಟ್ಟಾಕಿದಾನೆ ಕಣೇ. ಯಾಕಾದ್ರೂ ಗ್ರಾಚಾರ ಕೆಟ್ಟು ಇಸ್ತ್ರಿ ಮಾಡೋಕೆ ಕೊಟ್ನೋ? ಕಣ್ಣಿಗೆ ಎಣ್ಣೆ ಬಿಟ್ಕೊಂಡು ಹುಡುಕಿದ್ರೂ ಇಂತಾದ್ದು ಮತ್ತೊಂದು ಸಿಗಲ್ಲ...’

ನಂದಿನಿಗೂ ಬೇಜಾರಾಗಿತ್ತು. ಆದರೆ ಅಮ್ಮನ ಗೋಳಾಟ ನೋಡುತ್ತಾ, ಕೇಳುತ್ತಾ ಕೂರಲು ಈಗ ಸಮಯವಿಲ್ಲ.

‘ಹೋಗ್ಲಿ ಬಿಡೇ ಅಮ್ಮಾ. ತಗೊಂಡು ಇಪ್ಪತ್ತು ವರ್ಷ ಆಗಿತ್ತೇನೋ ಅಲ್ವಾ? ಇಟ್ಟಿಟ್ಟು ಲಡ್ಡು ಹಿಡಿದು ಹೋಗಿತ್ತೇನೋ...’

‘ಎಷ್ಟು ಸುಲಭಕ್ಕೆ ಹೇಳ್ತಿ. ನಿಂಗೆ ಹೊಟ್ಟೆ ಉರೀತಿಲ್ವಾ?’

‘ಉರೀತಿದೆ ಅಮ್ಮಾ. ಮದುವೆ ಮನೆಯಿಂದ ಬಂದ್ಮೇಲೆ ಅವನನ್ನು ವಿಚಾರಿಸಿಕೊಳ್ಳೋಣ. ಈಗೆಲ್ಲುಂಟು ಪುರುಸೊತ್ತು?’

ಮಗಳು ಕೊಟ್ಟ ಸೀರೆ ಉಟ್ಟುಕೊಂಡು ಅರೆಮನಸ್ಸಿನಿಂದ ಹೊರಟಿದ್ದಳು ಅಮ್ಮ. ಆದರೂ ಮುಖದಲ್ಲಿ ಕಳೆ ಇಲ್ಲ. ಲವಲವಿಕೆ ಇಲ್ಲ.

‘ನಿಂಗೆ ಮತ್ತೊಂದು ಅಂತದೇ ಸೀರೆ ತೆಗೆಸ್ಕೊಟ್ರಾಯ್ತಲ್ಲ. ಒಂಚೂರು ನಗೇ ಮಾರಾಯ್ತೀ...’ ಅಂದಿದ್ದಳು ನಂದಿನಿ.

‘ಒಂದೊಳ್ಳೆ ಸೀರೆ ಅಂದ್ರೆ ಅದರ ಹಿಂದೆ ಏನೇನೋ ನೆನಪು ಇರುತ್ತೆ ಕಣೇ. ನಿಂಗೊತ್ತಾಗಲ್ಲ...’

‘ಆಯ್ತು ಅಮ್ಮಾ, ಅಂತಾ ಸೀರೇನ ಸುಟ್ಟಾಕಿದ ಅವನಿಗೆ ಜಕಣಿ ಬಿಡಿಸೋಣ ಆಯ್ತಾ?’

‘ಅಷ್ಟು ಸುಲಭ ಅಂದ್ಕಂಬೇಡ. ಮೊದಲೇ ಹಾಗಿತ್ತು ಅಂತ ಅವನು ಸಾಧಿಸ್ಬಿಟ್ರೆ ಕೇಳು...’

ಅದು ಆಗಿದ್ದೂ ಹಾಗೇ. ಮೊದಲೇ ಹಾಗಿತ್ತು ಅಂತ ಅವನು ಸಾಧಿಸಿಬಿಟ್ಟ. ‘ತಪ್ಪಾಗಿದೆ ಅಂತ ಒಪ್ಕೊಂಬಿಡು. ಸೀರೆ ಡ್ಯಾಮೇಜ್ ಮಾಡಿದ್ದಕ್ಕೆ ಪರಿಹಾರ ಕೊಡು’ ಎಂದೆಲ್ಲಾ ಬೈದು ಬಂದ ಮಗಳು ಮತ್ತೆ ಅವನಿಗೇ ಬಟ್ಟೆ ಇಸ್ತ್ರಿ ಮಾಡಲು ಕೊಡುತ್ತಾಳೆ ಅನ್ನುವುದು ಮಾತ್ರ ಅಮ್ಮನಿಗೆ ಅರ್ಥವಾಗದ ಸಂಗತಿ.

‘ಬೇರೆ ಯಾರೂ ಸಿಗಲ್ಲವೇನೆ ನಿಂಗೆ?’ ಅಸಮಾಧಾನದಿಂದ ಕೇಳಿದ್ದಳು ಅಮ್ಮ.

‘ಅಯ್ಯೋ, ಅವನು ಇಷ್ಟುದ್ದ ಹುಡುಗ ಇದ್ದಾಗಿಂದ ಅಪ್ಪನ ಜೊತೆ ಕೆಲಸ ಮಾಡ್ತಿದ್ದಿದ್ದು ನೋಡಿದೀನಿ. ಅವನ ಹತ್ರಾನೇ ಇಸ್ತ್ರಿಗೆ ಕೊಟ್ಟು ಕೊಟ್ಟು ಅಭ್ಯಾಸ ಆಗ್ಬಿಟ್ಟಿದೆ. ನಾವು ಹೋಗ್ಲಿಲ್ಲ ಅಂದ್ರೆ ಮನೆಗೇ ತಂದುಕೊಡ್ತಾನೆ,